ಅರ್ಥ ಕಟ್ಟಿ, ಇದರಲ್ಲಿ ಏನೆಲ್ಲ ಅರ್ಥದ ಸ್ತರಗಳಿದ್ದಾವೆ ಅಂತ ವಾದಿಸಿ ನನಗೆ ಸಿಟ್ಟು ತರಿಸಿದ್ರು. 'ಸಮಗಾರ ಭೀಮವ್ವ' ಕವಿತೆಯ ಕೆಲ ಸಾಲುಗಳು ನನ್ನನ್ನ ಹಿಂಬಾಲಿಸಿಕೊಂಡು ಬಂದಿವೆ. ಕುವೆಂಪು, ಬೇಂದ್ರೆ, ಪುತಿನ, ಕೆ.ಎಸ್. ನರಸಿಂಹಸ್ವಾಮಿ, ಗೋಪಾಲಕೃಷ್ಣ ಅಡಿಗರ ಕಾವ್ಯ ಕೊಡುವ ಅನುಭವ ಬೇರೆ ತರಹದ್ದು. ಓದಿದ್ದರ ಕುರುಹು ಏನಂದ್ರೆ ಅವು ನಮ್ಮ ಜೊತೆ ಬದುಕ್ತಾ ಇರ್‍ತವೆ ಅಥವಾ ನಾವು ಅವುಗಳ ಜೊತೆ ಬದುಕ್ತಾ ಇರ್‍ತೀವಿ. ಶಿವಪ್ರಕಾಶ್ ಕಾವ್ಯದಲ್ಲಿ ಅದಿಲ್ಲ ಅಂದಾಗ ಅದರ ನೆಗೆಟಿವ್ ಪಾಯಿಂಟ್‌ನ್ನು ನಾನು ಹೇಳಿದೀನಿ ಅಂತ ಅನ್ಕೊಂಡಿದೀನಿ. ವಾಸ್ತವವಾಗಿ ಅನೇಕರ ಗಮನಕ್ಕೆ ಇದು ಬಂದಂಗಿಲ್ಲ. ಯಾವುದು ಗಟ್ಟಿ ಬರಹ ಆಗ್ತದೆ ಅಂದ್ರೆ ನನ್ನನ್ನ ಆವರಿಸಿಕೊಂಡಾಗ ಮಾತ್ರ. 'ಮಲೆಗಳಲ್ಲಿ ಮದುಮಗಳು', 'ಕಾನೂರು ಹೆಗ್ಗಡತಿ', ಕಾರಂತರ ಕಾದಂಬರಿಗಳು, ಕೆಎಸ್‌ಎನ್ ಕವಿತೆಗಳು ಬೇಕಾದಷ್ಟು ಉದಾಹರಣೆ ಕೊಡಬಹುದು. ಇವೆಲ್ಲ ನನ್ನೊಳಗಡೆ ಬಂದು ಸೇರಿಕೊಳ್ತವೆ. ಹಾಗಾಗದೆ ಇದ್ರೆ ವಿಮರ್ಶೆ ಬರೀಬೇಡಿ ಅಂತ ಹೇಳ್ತೀನಿ. ಬರೆದರೂ ಕೂಡ ಅದೊಂದು ಬರವಣಿಗೆ ಮಾತ್ರವಾಗಿ ಉಳೀತದೆ ಹೊರತು ಇನ್ನೇನೂ ಆಗೋದಿಲ್ಲ. ಅದನ್ನ ಇನ್ನೊಂದು ಸಾರಿ ಓದಬೇಕು ಅನ್ನಿಸಬೇಕು. ಕೃತಿ ಮತ್ತೆ ಮತ್ತೆ ಕರೆಯದೇ ಇದ್ರೆ ಅದು ನನ್ನನ್ನ ಆಕರ್ಷಿಸ್ತಾ ಇಲ್ಲ ಅಂತ ಅರ್ಥ. ಇದರ ಬಗ್ಗೆ ಬರೀಬಾರ್‍ದು ಅಂತಲ್ಲ. ಬರೆದರೂ ಕೂಡ ಕೃತಿಯನ್ನು ಪರೀಕ್ಷೆ ಮಾಡ್ಲಿಕ್ಕೂ ಆಗಲ್ಲ, ನಮ್ಮನ್ನು ಪರೀಕ್ಷೆ ಮಾಡಿಕೊಳ್ಳಲಿಕ್ಕೂ ಆಗಲ್ಲ. ಕೆಲವು ಕೃತಿಗಳಿಗೆ ಮುನ್ನುಡಿ ಬರೀತೀನಿ ಅಂತ ತೆಗೆದುಕೊಂಡು ಕೂಡ ಬರೀಲಿಕ್ಕೆ ಆಗಲಿಲ್ಲ ನನಗೆ. ಯಾಕೆ ಬರೀಲಿಲ್ಲ ಅಂತ ಗೊತ್ತಿಲ್ಲ. ಇದಕ್ಕಿರಬಹುದಾದ ಸರಳ ಕಾರಣ ಅಂತಂದ್ರೆ ಅದು ಮತ್ತೆ ಓದುವಂತೆ ನನ್ನನ್ನು ಆಹ್ವಾನಿಸಿಲ್ಲ ಅನ್ನೋದು.

**◆ ಅನಾರ್ಕಿಸಂ ಅನ್ನೋದನ್ನ ಕನ್ನಡದಲ್ಲಿ ಅರಾಜಕತಾವಾದ ಅಂತ ಬಳಸ್ತೀವಿ. ತುಂಬಾ ನಕಾರಾತ್ಮಕ ಅರ್ಥ ಇದೆ ಕನ್ನಡದಲ್ಲಿ. ಆದರೆ ಅನಾರ್ಕಿಸಂ ಅನ್ನುವುದನ್ನು ನಕಾರಾತ್ಮಕ ಅರ್ಥದಲ್ಲಿ ಬಳಸಬೇಕಾಗಿಲ್ಲ. ಅವರು ಒಂಥರದಲ್ಲಿ ಅತೃಪ್ತ ಓದುಗರು. ಅನಾರ್ಕಿಸಂ ಅನ್ನೋ ಫಿಲಾಸಫಿಕಲ್ ಸ್ಕೂಲ್ ಕೂಡ ಇದೆ. ಇದನ್ನ ಯಾಕೆ ಹೇಳ್ತಿದ್ದೀನಿ ಅಂತಂದ್ರೆ ನಿಮ್ಮ ವಿಮರ್ಶಾ ವ್ಯಕ್ತಿತ್ವದಲ್ಲೂ ಕೂಡ ಕೊಂಚ ಈ ಅನಾರ್ಕಿಸ್ಟ್ ಗುಣ ಇದೆ ಅಂತ ಅನ್ನಿಸ್ತಿದೆ.**

ಅನಾರ್ಕಿಸಂ ಅನ್ನೋದಕ್ಕೆ ಒಂದು ಪರ್ಯಾಯವಾದ ಪದವನ್ನು ರೂಪಿಸಲಿಕ್ಕಾಗಲಿಲ್ಲ ನಮಗೆ. ರಾಜೇಂದ್ರ ಚೆನ್ನಿ ಎಲ್ಲೋ ಒಂದು ಕಡೆ ಬೇರೆ ಪದ ಬಳಸಿದ್ರು, ನೆನಪಾಗ್ತಿಲ್ಲ ನನಗೆ. ಅನಾರ್ಕಿಸಂ ಅನ್ನೋ ಪದ ಗ್ರೀಕರ ಕಾಲದಿಂದಲೂ ಬಳಕೆಯಲ್ಲಿದೆ. ಸ್ಕೂಲ್ ಆಫ್ ಥಾಟ್ ಅದು. ಅದು ಯಾವಾಗಲೂ ಅಧಿಕಾರದ ಕೇಂದ್ರಗಳನ್ನ, ಸಿದ್ಧ ನಿಲುವುಗಳನ್ನ ಪ್ರಶ್ನಿಸುತ್ತದೆ. ಪ್ರಶ್ನಿಸೋದಂದ್ರೆ ನಿರಾಕರಣೆ ಮಾಡೋದು ಅಂತಲ್ಲ. ಅದಕ್ಕೆ ಹೊಸ ಹೊಸ ಸವಾಲುಗಳನ್ನು ಕೊಡ್ತದೆ. ನೀನು ನನ್ನ ಮೇಲೆ ಅಧಿಕಾರವನ್ನ ಮಾಡ್ತಾ ಇದ್ದಿ ಅಂದ್ರೆ ನಿನಗೆ ಅಧಿಕಾರವನ್ನ ಕೊಟ್ಟವರು ಯಾರು? ಸ್ಪೇನ್‌ನಲ್ಲಿ ಸಿವಿಲ್ ವಾರ್ ಆಗುವ ಮೊದಲು ಕೆಲವು ವರ್ಷಗಳ ಕಾಲ ಈ ಅನಾರ್ಕಿಸ್ಟ್‌ರೇ ಆಳ್ವಿಕೆ ಮಾಡ್ತಾ ಇದ್ರು. ಈ ಕುರಿತು ಚಾಮ್‌ಸ್ಕಿ ಬಹಳ ಬರೆದಿದ್ದಾರೆ. ಚಾಮ್‌ಸ್ಕಿ ಕೂಡ ಒಬ್ಬ ಅನಾರ್ಕಿಸ್ಟ್. ಆತನ 'ಆನ್ ಅನಾರ್ಕಿಸಂ' ಪುಸ್ತಕವನ್ನ ಯಾರೂ ಸೀರಿಯಸ್ಸಾಗಿ ತೆಗೆದುಕೊಂಡೇ ಇಲ್ಲ. 1940ರಿಂದಲೂ ಗಂಭೀರವಾಗಿ ಈ ಅನಾರ್ಕಿಸಂ ಬಗ್ಗೆ ಬರೀತಾ ಬಂದಿದ್ದಾನೆ. ಅಧಿಕಾರ ಕೇಂದ್ರಗಳಿಗೆ ಮಾತ್ರವಲ್ಲ, ಸಾಹಿತ್ಯದ ದೃಷ್ಟಿಯಿಂದಲೂ ಇದು ಅವಶ್ಯಕವಾದದ್ದು. ಸಾಹಿತ್ಯವನ್ನು ಗೌರವದಿಂದ ನೋಡೋದು ಬೇರೆ. ಅದರ ಜೊತೆಗೆ ಸಂವಾದದಲ್ಲಿ ತೊಡಗೋದು ಬೇರೆ. ಯಾವುದೇ ಸ್ಥಿತಿ ಸಂವಾದರಹಿತ ಆಗಿರಬೇಕಾಗಿಲ್ಲ. ಪ್ರಶ್ನೆ ಮಾಡೋದು ಅಂದ್ರೆ ವಿರೋಧ ಮಾಡೋದು ಅಂತಲ್ಲ. ನಮ್ಮಲ್ಲಿ ಏನಾಗಿದೆ ಅಂದ್ರೆ, ದಾರೀಲಿ ಹೋಗ್ತಾ ಗಿಡದ ಎಲೆಗಳನ್ನು ಹರಕೊಳ್ತಾ ಹೋಗ್ತಾರಲ್ಲ, ಹಾಗೆ ಅಂಥವರನ್ನ ಅರಾಜಕತಾವಾದಿ ಅಂತ ಗುರುತಿಸಲಾಗ್ತಿದೆ. ಏನೋ ಒಂದು ಕ್ಯಾತೆ ಇವರದು ಸದಾ ಅನ್ನೋ ಹಾಗೆ. ಅರವಿಂದ ಕೇಜ್ರಿವಾಲ್ ತನ್ನನ್ನು ತಾನು ಅನಾರ್ಕಿಸ್ಟ್ ಅಂತ ಕರ್ಕೊಂಡ್ರು. ಅದನ್ನ ಅನೇಕರು ಗೇಲಿ ಮಾಡಿದರು. ಪ್ರಜಾವಾಣಿಯಲ್ಲಿ ಈ ಕುರಿತು ಒಂದು ಲೇಖನ ಬರೆದೆ ನಾನು. ಹೌದು, 'ಐ ಆಮ್ ಅನಾರ್ಕಿಸ್ಟ್'.